# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಕಡ್ಡಾಯವಾಗಿ National Academic Depository/ Digilocker ನಲ್ಲಿ ಅಳವಡಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 29 EGOV 2023, ದಿನಾಂಕ: 16.10.2023.
2. ಸರ್ಕಾರದ ಆದೇಶ ಸಂಖ್ಯೆ: ಇಪಿ 69 ಎಸ್‌ಹೆಚ್‌ಹೆಚ್ 2026, ದಿನಾಂಕ: 08.04.2026.
3. ಆಯುಕ್ತಾಲಯದ ಏಕ ಕಡತ ಸಂಖ್ಯೆ: DPI-CPI0C4-9/67/2026ರ ಸಲ್ಲಿಸಿರುವ ಪ್ರಸ್ತಾವನೆ.

*****

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮಾಂಕ (1) ರ ಸರ್ಕಾರದ ಆದೇಶದಲ್ಲಿ ರಾಜ್ಯ ಸರ್ಕಾರವು 2023-24ನೇ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಯಡಿನ ಅಧೀನ ಇಲಾಖೆಗಳು, ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು, ಪ್ರಮಾಣಪತ್ರಗಳು ಹಾಗೂ ಇತರ ಶೈಕ್ಷಣಿಕ ದಾಖಲೆಗಳನ್ನು NAD-DigiLocker ನಲ್ಲಿ ಡಿಜಿಟಲ್ ರೂಪದಲ್ಲಿ ಕಡ್ಡಾಯವಾಗಿ ಸಂಗ್ರಹಿಸಿಡಲು, ಉನ್ನತ ಶಿಕ್ಷಣದ ವಿದ್ಯಾರ್ಥಿಗಳು ಸದರಿ ಅಂಕಪಟ್ಟಿಗಳ Credits ಗಳನ್ನು Academic Bank of Credits (ABC) ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಆದೇಶಿಸಿದೆ. ವಿವಿಧ ನೇಮಕಾತಿ ಪ್ರಾಧಿಕಾರಗಳು/ಸಂಸ್ಥೆಗಳು ನೇಮಕಾತಿ ಸಮಯದಲ್ಲಿ NAD-DigiLocker ನಲ್ಲಿನ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನು ದೃಢೀಕೃತವೆಂದು ಪರಿಗಣಿಸುವಂತೆ ಆದೇಶಿಸಲಾಗಿದೆ. ಅದರಿಂದ ರಾಜ್ಯದ ಗ್ರಾಮೀಣ ಪ್ರದೇಶದ ಹಲವಾರು ಎಸ್.ಎಸ್.ಎಲ್.ಸಿ. ಉತ್ತೀರ್ಣಗೊಂಡ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ ನೈಜತೆಯನ್ನು ಪಡೆಯಲು ಬೆಂಗಳೂರಿನ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯ (KSEAB) ಅಧೀನದಲ್ಲಿರುವ ಅಂಕಪಟ್ಟಿ ಶಾಖೆಗೆ ಆನ್‌ಲೈನ್ ಮುಖಾಂತರ ಹಾಗೂ ಭೌತಿಕ ಅರ್ಜಿಗಳನ್ನು ಸಲ್ಲಿಸುತ್ತಿರುವುದರಿಂದ ಸಾಕಷ್ಟು ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2) ರ ಆದೇಶದಲ್ಲಿ 2026-27ನೇ ಶೈಕ್ಷಣಿಕ ಸಾಲಿನಿಂದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಭೌತಿಕ ಪ್ರತಿ ನೀಡುವ ಪದ್ಧತಿಯನ್ನು ಕೈಬಿಟ್ಟು APAAR ID, Aadhar ID ಹಾಗೂ PHOTO ದೊಂದಿಗೆ ಕಡ್ಡಾಯವಾಗಿ ಅಂಕಪಟ್ಟಿಯನ್ನು National Academic Depository (NAD)/ Digilocker ನಲ್ಲಿ ಅಳವಡಿಸುವಂತೆ ಹಾಗೂ ಸದರಿ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳನ್ನು ರಾಜ್ಯದ ಹೊರಗೆ ಹಾಗೂ ಒಳಗೆ ಉನ್ನತ ವ್ಯಾಸಂಗಕ್ಕಾಗಿ ಅಧಿಕೃತವೆಂದು ಪರಿಗಣಿಸುವಂತೆ ಮತ್ತು ನೇಮಕಾತಿಗೆ ದೃಢೀಕೃತವೆಂದು ಪರಿಗಣಿಸುವಂತೆ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (3)ರ ಆಯುಕ್ತಾಲಯದ ಏಕ ಕಡತ ಪ್ರಸ್ತಾವನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ನೀಡುವ ಸಲುವಾಗಿ ವಿದ್ಯಾರ್ಥಿಗಳಿಂದ ಶುಲ್ಕ ಪಡೆದಿದ್ದು, ಭೌತಿಕ ಅಂಕಪಟ್ಟಿ ಮುದ್ರಣಕಾರ್ಯದ ಸಂಬಂಧಿತ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಪ್ರಸ್ತಕ್ತ ಸಾಲಿಗೆ ಮುದ್ರಿತ ಅಂಕಪಟ್ಟಿ ಪತ್ರಿಗಳನ್ನು ನೀಡುವ ಪದ್ಧತಿಯನ್ನು ಮುಂದುವರೆಸುವುದರ ಜೊತೆಗೆ ಮೇಲೆ ಓದಲಾದ ಕ್ರಮಾಂಕ (1) ಮತ್ತು (2) ರ ಆದೇಶಗಳನ್ವಯ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಸಹ National Academic Depository/ Digilocker ನಲ್ಲಿ ಲಭ್ಯಗೊಳಿಸಿ, ಮುಂದಿನ ವರ್ಷದಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ

ಉತ್ತೀರ್ಣರಾಗುವ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಕಡ್ಡಾಯವಾಗಿ National Academic Depository/ Digilocker ನಲ್ಲಿ ಅಳವಡಿಸುವ ಕುರಿತು ಹಾಗೂ ವಿದ್ಯಾರ್ಥಿಗಳು ಮತ್ತು ಪೋಷಕರುಗಳಿಗೆ ವ್ಯಾಪಕ ಪ್ರಚಾರ ನೀಡಿ ಭೌತಿಕ ಪ್ರತಿ ನೀಡುವ ಪದ್ಧತಿಯನ್ನು ಕೈಬಿಟ್ಟು National Academic Depository/ Digilocker ನಲ್ಲಿ ಅನ್ನು ಮಾತ್ರ ಬಳಸಲು ಸರ್ಕಾರದಿಂದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆಯುಕ್ತಾಲಯದ ಏಕ ಕಡತದ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಲಾಗಿ, ನಕಲಿ ಅಂಕಪಟ್ಟಿ ಹಾವಳಿಯನ್ನು ತಪ್ಪಿಸುವ ದೃಷ್ಟಿಯಿಂದ ಹಾಗೂ ವಿದ್ಯಾರ್ಥಿಕ ಶೈಕ್ಷಣಿಕ ದಾಖಲೆಗಳನ್ನು ಶಾಶ್ವತವಾಗಿ ಒಂದೇ ತಂತ್ರಾಂಶದಲ್ಲಿ ಶೇಖರಿಸಿಡಬಹುದಾಗಿದ್ದು, National Academic Depository/ Digilocker ಫ್ಲಾಟ್‌ಫಾರ್ಮ್ ಮೂಲಕ ಅಪ್ ಲೋಡ್ ಮಾಡಿದ ನಂತರ ಎಲೆಕ್ಟ್ರಾನಿಕ್ ರೂಪದಲ್ಲಿ ನೀಡಲಾದ ವಿದ್ಯಾರ್ಥಿಗಳ ಶೈಕ್ಷಣಿಕ ಸೆಳೆಯುವ ಸೌಲಭ್ಯವನ್ನು ಹೊಂದಿದ್ದು, Digilocker ಫ್ಲಾಟ್‌ಫಾರ್ಮ್‌ನಲ್ಲಿ ಲಭ್ಯವಿರುವ ದಾಖಲೆಗಳನ್ನು ಮಾಹಿತಿ ತಂತ್ರಜ್ಞಾನ ಕಾಯ್ದೆ-2020ರ ನಿಬಂಧನೆಯ ಪ್ರಕಾರ ಮಾನ್ಯವಾದ ದಾಖಲೆಗಳಾಗಿರುತ್ತವೆ ಹಾಗೂ Digilocker ಖಾತೆಗಳಲ್ಲಿ ನೀಡಲಾದ ದಾಖಲೆಗಳಲ್ಲಿ ಲಭ್ಯವಿರುವ ಅಂಕಪಟ್ಟಿಗಳು, ಪ್ರಮಾಣಪತ್ರಗಳು ಮತ್ತು ಇತರ ಶೈಕ್ಷಣಿಕ ದಾಖಲೆಗಳನ್ನು ದೃಢೀಕೃತ ದಾಖಲೆಗಳಾಗಿ ಸ್ವೀಕರಿಸಲು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿಯು ಅಧಿಸೂಚನೆಗಳ ಮೂಲಕ ತಿಳಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ವಯ ಪ್ರಸಕ್ತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ನೀಡುವ ಸಲುವಾಗಿ ವಿದ್ಯಾರ್ಥಿಗಳಿಂದ ಶುಲ್ಕ ಪಡೆದು ಭೌತಿಕ ಅಂಕಪಟ್ಟಿ ಮುದ್ರಣ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಎಸ್ .ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಭೌತಿಕ ಅಂಕಪಟ್ಟಿ ಪ್ರತಿಗಳನ್ನು ನೀಡುವ ಪದ್ಧತಿಯನ್ನು ಮುಂದುವರೆಸುವುದರ ಜೊತೆಗೆ ಅಂಕಪಟ್ಟಿಗಳನ್ನು National Academic Depository (NAD)/ Digilocker ನಲ್ಲಿ ಲಭ್ಯಗೊಳಿಸಿ, ಮುಂದಿನ ವರ್ಷದಿಂದ ಭೌತಿಕ ಪ್ರತಿ ನೀಡುವ ಪದ್ಧತಿಯನ್ನು ಕೈಬಿಟ್ಟು National Academic Depository/ Digilocker ನಲ್ಲಿ ಮಾತ್ರ ಕಡ್ಡಾಯವಾಗಿ ಅಳವಡಿಸುವ ಬಗ್ಗೆ, ಈ ಕೆಳಕಂಡಂತೆ ಆದೇಶ ಹೊರಡಿಸಲು ಸರ್ಕಾರವು ತೀರ್ಮಾನಿಸಿ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಇಪಿ 49 ಎಸ್‌ಒಹೆಚ್ 2026,**
**ಬೆಂಗಳೂರು, ದಿನಾಂಕ:18.04.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸಕ್ತ ಸಾಲಿನಲ್ಲಿ ಎಸ್.ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಭೌತಿಕ ಅಂಕಪಟ್ಟಿಯ ಪ್ರತಿಯನ್ನು ನೀಡಲು ಹಾಗೂ ಸದರಿ ಅಂಕಪಟ್ಟಿಗಳನ್ನು National Academic Depository (NAD)/ Digilocker ನಲ್ಲಿ ಲಭ್ಯಗೊಳಿಸಲು ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ.

ಮುಂದುವರೆದು, 2026-27ನೇ ಶೈಕ್ಷಣಿಕ ಸಾಲಿನಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಭೌತಿಕ ಪ್ರತಿ ನೀಡುವ ಪದ್ಧತಿಯನ್ನು ಕೈಬಿಟ್ಟು APAAR ID, Aadhar ID ಹಾಗೂ PHOTO ದೊಂದಿಗೆ ಕಡ್ಡಾಯವಾಗಿ ಅಂಕಪಟ್ಟಿಯನ್ನು National Academic Depository (NAD)/ Digilocker ನಲ್ಲಿ ಮಾತ್ರ ಅಳವಡಿಸುವಂತೆ ಸಹ ಆದೇಶಿಸಿದೆ.

National Academic Depository (NAD)/ Digilocker ನಲ್ಲಿ ಲಭ್ಯಗೊಳಿಸಲಾದ ಅಂಕಪಟ್ಟಿಯನ್ನು ರಾಜ್ಯದ ಹೊರಗೆ ಹಾಗೂ ಒಳಗೆ ಉನ್ನತ ವ್ಯಾಸಂಗಕ್ಕಾಗಿ ಅಧಿಕೃತವೆಂದು ಪರಿಗಣಿಸುವಂತೆ ಹಾಗೂ ವಿವಿಧ ನೇಮಕಾತಿ ಪ್ರಾಧಿಕಾರಗಳು/ಸಂಸ್ಥೆಗಳು ನೇಮಕಾತಿ ಸಮಯದಲ್ಲಿ

National Academic Depository (NAD)/ Digilocker ನಲ್ಲಿನ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನು ಮಾನ್ಯ/ದೃಢೀಕೃತವೆಂದು ಪರಿಗಣಿಸುವಂತೆ ಸೂಚಿಸಿದೆ.

**ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯು ಪಾಲಿಸಬೇಕಾಗಿರುವ ಷರತ್ತುಗಳು:**

1. APAAR ID, Aadhar ID ಹಾಗೂ PHOTO ಸಹಿತ ಅಂಕಪಟ್ಟಿಗಳನ್ನು ಫಲಿತಾಂಶ ಪ್ರಕಟವಾದ ದಿನದಂದೇ ಹಾಗೂ ಮರುಎಣಿಕೆ ಮತ್ತು ಮರು ಮೌಲ್ಯಮಾಪನದ ಫಲಿತಾಂಶವನ್ನು ಪ್ರಕಟಿಸಿದ ದಿನದಂದೇ ಪರಿಷ್ಕೃತ/ಅಂಕಪಟ್ಟಿಗಳನ್ನು National Academic Depository (NAD)/ Digilocker ನಲ್ಲಿ ಅಳವಡಿಸುವುದು.

2. ಅಭ್ಯರ್ಥಿಗಳ ದತ್ತಾಂಶ ವರ್ಗಾವಣೆಗೆ ಸುಮಾರು 72 ಗಂಟೆಗಳು ಅವಶ್ಯವಿದ್ದು, ಈ ಕಾಲಮಿತಿಯನ್ನು ಕಡಿತಗೊಳಿಸಲು Project Director, NAD ಮತ್ತು Senior Consultant, NAD ರವರಿಂದ ನಿಯಮಗಳನುಸಾರ ಕ್ರಮವಹಿಸುವುದು.

3. ವಿದ್ಯಾರ್ಥಿಗಳ ಕೆಲವು ಮಾಹಿತಿಗಳನ್ನು ಹಾಗೂ Security features ಗೆ ಸಂಬಂಧಿಸಿದಂತೆ DigiLocker ನಲ್ಲಿ ಪ್ರಸ್ತುತ ನೀಡುತ್ತಿರುವ Template ನಲ್ಲಿ ಅಗತ್ಯ ಬದಲಾವಣೆ ಮಾಡಿ APAAR ID, Aadhar ID ಹಾಗೂ PHOTO ಒಳಗೊಂಡಂತೆ ಎಲ್ಲಾ ಅಗತ್ಯ ಮಾಹಿತಿಯನ್ನು ಒಳಗೊಂಡಿರುವ ಪರಿಷ್ಕೃತ Template ನೀಡಲು ಅವಶ್ಯ ಕ್ರಮವಹಿಸುವುದು.

4. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಕಡ್ಡಾಯವಾಗಿ ಅಂಕಪಟ್ಟಿಗಳನ್ನು National Academic Depository (NAD)/ Digilocker ನಲ್ಲಿ ಅಳವಡಿಸುವ ಕುರಿತು ವಿದ್ಯಾರ್ಥಿಗಳು ಮತ್ತು ಪೋಷಕರುಗಳಿಗೆ ವ್ಯಾಪಕ ಪ್ರಚಾರ ನೀಡುವುದು.

5. ಪ್ರಸಕ್ತ ಸಾಲಿನಲ್ಲಿ ನೀಡಲಾಗುತ್ತಿರುವ ಭೌತಿಕ ಅಂಕಪಟ್ಟಿಗಳಲ್ಲಿ DigiLocker ನಲ್ಲಿ ಸಹ ಫೋಟೋ ಸಹಿತ ಅಂಕಪಟ್ಟಿ ನೀಡಲು ಕ್ರಮವಹಿಸುವುದು.

6. National Academic Depository (NAD)/ Digilocker ನಲ್ಲಿ ಅಂಕಪಟ್ಟಿಗಳನ್ನು ಲಭ್ಯಗೊಳಿಸುವುದರಿಂದ ದ್ವಿಪ್ರತಿ ಅಂಕಪಟ್ಟಿಗಳನ್ನು ನೀಡುವ ಪದ್ಧತಿಯನ್ನು ಕೈಬಿಡುವ ಬಗ್ಗೆ ಪರಿಶೀಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

18/4/26

(ಎಸ್.ಪ್ರಕಾಶ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರೌಢ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

**ಇವರಿಗೆ:-**

1. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ, ಬೆಂಗಳೂರು
3. ನಿರ್ದೇಶಕರು (ಆಡಳಿತ/ಪರೀಕ್ಷೆಗಳು), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ, ಬೆಂಗಳೂರು
4. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು.

5. ಸಮನ್ವಯಾಧಿಕಾರಿಗಳು, ಇ-ಆಡಳಿತ ಘಟಕ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು (ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ವಿಶೇಷ ಕಾರ್ಯದರ್ಶಿವರ ಆಪ್ತ ಸಹಾಯಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.